ಓಎಸ್ ನಂ.205/2013
ಪ್ರಾಸಾಃ 1

ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ದಿನಾಂಕಃ 23-03-2016

ಪಾಟೀ ಸವಾಲುಃ ಶ್ರೀ ಆರ್.ಡಿ.ಪಿ ವಕೀಲರಿಂದಃ

ನಾನು ಪಿಯುಸಿವರೆಗೆ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ನನ್ನ ತಂದೆ ಎಂದರೆ ಸರಿ. ನಮ್ಮ ಕುಟುಂಬಕ್ಕೂ ಮತ್ತು ಪ್ರತಿವಾದಿಯರ ಕುಟುಂಬಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಮ್ಮ ಮತ್ತು ಅವರ ಸ್ವತ್ತುಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿ. ನಮ್ಮ ತಂದೆಗೆ ಈಗ 54 ವರ್ಷ ವಯಸ್ಸು. ನನ್ನ ತಂದೆಗೆ ಸಕ್ಕರೆ ಕಾಯಿಲೆ, ಕಣ್ಣಿನ ದೃಷ್ಟಿ ಕಾಯಿಲೆಯಿಂದ ಬಳಲುತ್ತಾ ಇರುತ್ತಾರೆ. ಈ ಬಗ್ಗೆ ತೋರಿಸಲು ನಾನು ದಾಖಲೆಗಳನ್ನು ಹಾಜರು ಪಡಿಸಿಲ್ಲ. ನನ್ನ ತಂದೆ ನಾನು ಹೇಳಿದಂತೆ ಅನಾರೋಗ್ಯದಿಂದ ಬಳಲುತ್ತಾ ಇರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರ ತಯಾರಿಸಲು ನಾನು ಮತ್ತು ನನ್ನ ತಂದೆ ಮಾಹಿತಿ ನೀಡಿರುತ್ತೇವೆ. ನನ್ನ ತಂದೆ ಈ ದಾವೆಯ ವಿಚಾರಣೆಯ ಪ್ರತಿ ಮುದತ್ತಿಗೂ ನ್ಯಾಯಾಲಯಕ್ಕೆ ಬರುತ್ತದ್ದರು ಎಂದರೆ ಸರಿ. ನನ್ನ ತಂದೆಗೆ ಸಾಕ್ಷ್ಯ ವಿಚಾರಣೆ ನೀಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅನಾರೋಗ್ಯದಿಂದ ಬಳಲುತ್ತಾ ಇರುತ್ತಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವೆಯನ್ನು ವಿಪಿಸಿ ನಂ.478ಕ್ಕೆ ಸಲ್ಲಿಸಿರುತ್ತೇವೆ. ಸದರಿ ವಿಪಿಸಿ ನಂ.478ರ ಸ್ವತ್ತಿನ ಪೂರ್ವಕ್ಕೆ ಮರಗುಬಾಯಿ ದೇವಸ್ಥಾನ ಮತ್ತು ವಿಪಿಸಿ ನಂ.476, ಪಶ್ಚಿಮಕ್ಕೆ ವಿಪಿಸಿ ನಂ.477 ನಮಗೆ ಸೇರಿದ ಸ್ವತ್ತು, ಉತ್ತರಕ್ಕೆ ಪಂಚಾಯತಿ ರಸ್ತೆ ಮತ್ತು ದಕ್ಷಿಣಕ್ಕೆ ಮೊದಲು ಅಣ್ಣಪ್ಪ ವಡ್ಡರ ಇವರಿಗೆ ಸೇರಿದ ಸ್ವತ್ತು ಈಗ ಮರಗೂಬಾಯಿ ದೇವಸ್ಥಾನದ ಸ್ವತ್ತು ಇರುತ್ತದೆ. ವಿಪಿಸಿ ನಂ.477ನ್ನು ನಾವು ಕ್ರಯಕ್ಕೆ ಪಡೆದ ಸ್ವತ್ತು. ಸದರಿ ಸ್ವತ್ತಿನ ಉತಾರೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ಸ್ವತ್ತಿನಲ್ಲಿ ನಾವು 1978 ರಲ್ಲಿ ಮನೆ ಕಟ್ಟಿರುತ್ತೇವೆ. ಮನೆ ಕಟ್ಟಲು ನಾವು ಪರವಾನಿಗೆಯನ್ನು ಪಡೆದಿಲ್ಲ, ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ವಿಪಿಸಿ ನಂ.477ನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿಯ ಉತಾರವನ್ನು ನಾನು ಹಾಜರುಪಡಿಸಿಲ್ಲ.

ಜಿಪಿಸಿ ನಂ.478 ನೇ ಸ್ವತ್ತು ನಮ್ಮ ತಂದೆಗೆ ನನ್ನ ತಾತ-ಮಹಾದೇವ ಅಣ್ಣಪ್ಪ ವಡ್ಡರ ಇವರು ಹಕ್ಕುಬಿಟ್ಟು ಪತ್ರದ ಮೂಲಕ ನೀಡಿರುತ್ತಾರೆ. ಸದರಿ ತಾತ-ಮಹಾದೇವ ಅಣ್ಣಪ್ಪ ವಡ್ಡರ ಇವನು ನನ್ನ ತಾಯಿಯ ಚಿಕ್ಕಪ್ಪ, ನನ್ನ ತಾಯಿ ಸದರಿ ಮಹಾದೇವ ಅಣ್ಣಪ್ಪ ವಡ್ಡರ ಇವರ ಸ್ವಂತ ಮಗಳಲ್ಲ ಎಂದರೆ ಸರಿ. ಮಹಾದೇವ ಅಣ್ಣಪ್ಪ ವಡ್ಡರ ಇವನು ನನ್ನ ತಂದೆಗೆ ಅಣ್ಣತಮ್ಮಂದಿರು ಅಲ್ಲ ಎಂದರೆ ಸರಿ. ಸದರಿ ಮಹಾದೇವ ಅಣ್ಣಪ್ಪ ವಡ್ಡರ ಇವರು ನನ್ನ ತಂದೆಗೆ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಮಹಾದೇವ ಅಣ್ಣಪ್ಪ ವಡ್ಡರ ಇವರು ನನ್ನ ತಂದೆಗೆ ನಾನು ಹೇಳಿದಂತೆ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ಹಕ್ಕುಬಿಟ್ಟು ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರುಪಡಿಸಿಸಲು ನನಗೆ ಯಾವುದೇ ತೊಂದರೆ ಇಲ್ಲ. ವಾದಪತ್ರದಲ್ಲಿ ಸನ್ 2001 ರಲ್ಲಿ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತೇನೆ. ಸನ್ 2001ರ ಪೂರ್ವದಿಂದಲೂ ಮತ್ತು ಈಗಲೂ ಸಹ ದಾವಾ ಸ್ವತ್ತಿಗೆ ಮಹಾದೇವ ಅಣ್ಣಪ್ಪ ವಡ್ಡರ ಇವನೇ ಮಾಲಿಕನು ಎಂದರೆ ಸರಿಯಲ್ಲ. ನಾನು 30 ವರ್ಷಗಳಿಂದ ದಾವಾ ಸ್ವತ್ತಿನ ಕಬ್ಜಾ ವಹಿವಾಟೆಯಲ್ಲಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರಶ್ನಿತ ಹಕ್ಕುಬಿಟ್ಟ ಪತ್ರವನ್ನು ಹಾಜರುಪಡಿಸಿದರೆ ನಿಜ ಸಂಗತಿ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಜಿಪಿ

ನಂ.478ನೇ ಸ್ವತ್ತಿಗೆ ಸಂಬಂಧಿದಂತೆ ಸನ್ 1978ರ ಪೂರ್ವದಲ್ಲಿಯ ಉತಾರೆಗಳನ್ನು ನಾನು ಹಾಜರುಪಡೆಸಿಲ್ಲ. ಜಿಪಿ ನಂ.476 ಇದು ಪ್ರತಿವಾದಿಯರ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಅವರು ಕಬ್ಜಾ ವಹಿವಾಟೆಯಲ್ಲಿ ಇದ್ದಾರೆ ಎಂದರೆ ಸರಿ. ಜಿಪಿ ನಂ.476ರ ಪೂರ್ವಕ್ಕೆ ಮರಗೂಬಾಯಿ ದೇವಸ್ಥಾನದ ಸ್ವತ್ತು, ಪಶ್ಚಿಮಕ್ಕೆ ಜಿಪಿ ನಂ.478ರ ಸ್ವತ್ತು, ಉತ್ತರಕ್ಕೆ ಪಂಚಾಯತಿ ರಸ್ತೆ ಮತ್ತು ದಕ್ಷಿಣಕ್ಕೆ ಮರಗೂಬಾಯಿ ದೇವಾಸ್ಥಾನ ಇರುತ್ತದೆ.

ಸನ್ 1990ರಲ್ಲಿ ಪ್ರತಿವಾದಿಯರು ಜಿಪಿ ನಂ.476ರಲ್ಲಿ ಪಂಚಾಯತಿ ಪರವಾನಿಗೆಯೊಂದಿಗೆ ಮನೆ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈಗ 2ನೇ ಪ್ರತಿವಾದಿಯ ಸೊಸೆಯ ಹೆಸರಿನಲ್ಲಿ ಸರ್ಕಾರದಿಂದ ಮನೆ ಮಂಜೂರಾಗಿದೆ ಎಂದೆರ ಸರಿ. ಸದರಿ ಮಂಜೂರಾತಿಗೆ ನಾನು ತಕರಾರು ಸಲ್ಲಿಸಿದ್ದೆನು ಎಂದರೆ ಸರಿ. ನಂತರ ಪಂಚಾಯತಿಯವರು ಸ್ಥಾನಿಕ ಚೌಕಾಶಿ ಮಾಡಿ ನನಗೆ ನಿಪಿ-8ನ್ನು ನೀಡಿರುತ್ತಾರೆ ಎಂದರೆ ಸರಿ. ಜಿಪಿ ನಂ.478ರ ಚಕಬಂದಿ ತೋರಿಸಲು ನಿಪಿ-15 ಹಾಜರುಪಡೆಸಿದ್ದೇನೆ ಎಂದರೆ ಸರಿ. ನಿಪಿ-15ರಲ್ಲಿ ಪಶ್ಚಿಮಕ್ಕೆ ಪಂಚಾಯತಿಯ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸರಿ. ನಿಪಿ-15ನ್ನು ನನಗೆ ಅನುಕೂಲಕ್ಕೆ ತಕ್ಕಹಾಗೆ ಬರೆಯಿಸಿಕೊಂಡು ಹಾಜರುಪಡೆಸಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಆಸ್ತಿಯೊದ ಜಿಪಿ ನಂ.478ರಲ್ಲಿ ಸರ್ಕಾರದಿಂದ ನನ್ನ ಪತ್ನಿಯ ಹೆಸರಿಗೆ ಮನೆ ಮಂಜೂರಾತಿ ಮಾಡಿಕೊಂಡು ಮನೆ ಕಟ್ಟುತ್ತಾ ಇರುತ್ತೇನೆ ಎಂದರೆ ಸರಿ. ಜಿಪಿ ನಂ.478ಕ್ಕೆ ನಾವು ಕಾನೂನುಬದ್ಧ ಮಾಲೀಕರು ಅಲ್ಲ ಎಂದು ಹಾಗೂ ಮನೆ ಕಟ್ಟುವುದನ್ನು ನಿಲ್ಲಿಸಿ ಎಂದು ಗ್ರಾಮ ಪಂಚಾಯತಿಯವರು ನೋಟಿಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣವಾಗಿ ಮನೆ ಕಟ್ಟಡ ನಿಲ್ಲಿಸಲಾಗಿದೆ ಎಂದರೆ ಸರಿ. ಸಾಕ್ಷಿ ಪುನಃ ನೀರಿನ ಅಭಾವ ಇರುವುದರಿಂದ ಮನೆ ಕಟ್ಟುವುದನ್ನು ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಜಿಪಿ ನಂ.477 ಮತ್ತು ಜಿಪಿ ನಂ.478ರ ವಿಸ್ತೀರ್ಣವನ್ನು ಉದ್ದೇಶಪೂರ್ವಕವಾಗಿ ಬರೆದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ, ಕಚ್ಚಾನಕ್ಷೆಯನ್ನು ಸಹ ನಮಗೆ ಬೇಕಾದ ಹಾಗೆ ತಯಾರಿಸಿ ಹಾಜರು ಪಡೆಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯ ಸ್ವತ್ತಿನಲ್ಲಿ ಅತೀಕ್ರಮಣ ಮಾಡಿ ಕಟ್ಟಡ ಕಟ್ಟಲು ಪಾಯವನ್ನು ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಪಾಯವನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಾನು ಹೇಳಿದಂತೆ ಪಾಯ ಹಾಕದೇ ಇರುವುದರಿಂದ ಕಚ್ಚಾನಕ್ಷೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡೆಸಿ ನಮ್ಮ ಮತ್ತು ಪ್ರತಿವಾದಿಯರ ಮಧ್ಯ ಬೇರೆ ದಾವೆಗಳು ಇರುತ್ತವೆ ಎಂದರೆ ಸರಿ.

ಈ ಹಂತದಲ್ಲಿ ನ್ಯಾಯಾಲಯದ ಮೊದಲನೆ ಅವಧಿ ಮುಕ್ತಾಯವಾದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಗಣಕೀಕರಣದಲ್ಲಿ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೆ. ಸರಿ ಇದೆ.

(ರಾಜಣ್ಣ ಸಂಕಣ್ಣನವರ)
ಪ್ರಧಾನ ದಿವಾಣಿ ನ್ಯಾಯಾಧೀಶರು ಚಿಕ್ಕೋಡಿ.